# ಮೌನ ಮಂಟಪ

ಡಿ.ಎನ್.ಗೀತಾ



## ನೆಲ ಮಾಳಿಗೆಯಲ್ಲಿತ್ತು ರಹಸ್ಯ..!

ಯಾರಿರಬಹುದೆಂದು ಯೋಚಿಸುತ್ತಲೇ ಬಾಗಿಲು ತೆರೆದಳು. ಪುರುಷೋತ್ತಮರು....ಅವರ ಹಿಂದೆ ಆತಂಕದ ಮುಖ ಹೊತ್ತ ಕಲಾವತಿ....

'ಏನಾಯ್ತಮ್ಮಾ ಋತು, ನೀನು ಜೋರಾಗಿ ಚೀರಿಕೊಂಡಿದ್ದು ಕೇಳಿ ಭಯವಾಗಿ ಓಡಿ ಬಂದ್ವಿ, ನಿನಗೇನೂ ಆಗಿಲ್ಲ ತಾನೇ?.' ಪುರುಷೋತ್ತಮರು ಅವಳನ್ನು ಬಳಸಿ ಹಿಡಿದು ಮಂಚದ ಮೇಲೆ ಕೂರಿಸಿದರು.

'ಏನಿಲ್ಲ ಪಪ್ಪ, ಏನೋ ಕೆಟ್ಟ ಕನಸು...' ಎಂದಳಷ್ಟೇ ಋತು.

'ನಂಗೊತ್ತು ಋತು, ಭರತನ ಬಗ್ಗೆ ನೀನು ತಲೆಕೆಡಿಸಿಕೊಂಡಿರ್ತಿ, ನಂಗೂ ಸಾಧುವಾಗಿದ್ದ ಅವ್ನು ಹೇಗೆ ಮನುಷ್ಯರ ರಕ್ತವನ್ನು ಹೀರುವ ಪಿಶಾಚಿಯಾಗಿ ಬದಲಾದ ಅಂತ ಆಶ್ಚರ್ಯ ಆಗುತ್ತೆ, ಏನ್ಮಾಡೋದು ಹೇಳು, ನಮ್ಮ ಕರ್ಮವನ್ನು ನಾವೇ ಅನುಭವಿಸಿಬೇಕಲ್ಲ...'. ಎಂದವರು ಕಲಾವತಿಯನ್ನು ಉದ್ದೇಶಿಸಿ..

'ನೀನು ಸ್ವಲ್ಪ ಹೊತ್ತು ಋತುವಿನ ಜೊತೆ ಮಲಗಿದ್ದು ಬಾ, ಈಗ್ಲೇ ಮೂರು ಗಂಟೆಯಾಗ್ತಿದೆ, ಬೆಳಗಾಗೋವರೆಗೆ ಅವಳು ನೆಮ್ಮದಿಯಾಗಿ ಮಲಗ್ಲಿ....' ಎಂದವರು ಋತುವಿನ ತಲೆದಡವಿ ಹೊರಟುಹೋದರು.

ಕಲಾವತಿ ಋತುವಿನ ಪಕ್ಕದಲ್ಲೇ ಮಲಗಿದಳು.

'ಋತು ನೀನೇ ನೋಡು, ಈ ಕೋಟೆ ಬಂಗ್ಲೆಗೆ ಎಂಥಾ ದುರ್ಗತಿ ಬಂತು ಅಂತ, ಭರತ ನೋಡಿದ್ರೆ ಭಯಂಕರ ಕ್ರಿಮಿನಲ್ಲಾಗಿ ಬದಲಾಗಿ ಜೈಲು ಪಾಲಾದ, ನೀನು ಹೀಗೆ ರಾತ್ರಿಯೆಲ್ಲಾ ಚೀರಾಡ್ತಿದ್ದಿ....ಕೋಟೆ ಬಂಗ್ಲೇನ ಎಲ್ಲೂ ಸೈತಾನನ ಬಂಗ್ಲೆ ಅಂತ ಕರೆಯೋಕೆ ಶುರು ಮಾಡಿದ್ದಾರೆ, ಇನ್ನು ಗುರುತು ಪರಿಚಯದವರ ಮುಂದೆ ನಾವು ತಲೆ ಎತ್ತೋಕಾಗುತ್ತಾ, ಇವೆಲ್ಲಾ ಆಗಿದ್ದು ಆ ಪಾಪಿ ಹೇಮಂತನಿಂದ್ಲೇ....' ಕಲಾವತಿ ಆಕ್ರೋಶಗೊಂಡಾಗ ಆಕೆಯತ್ತ ಋತು ಪ್ರಶ್ನಾರ್ಥಕವಾಗಿ ನೋಡಿದಳು.

'ಹೌದು ಮತ್ತೆ, ಭರತನೇ ಅಪರಾಧಿ ಅಂತ ಗೊತ್ತಾದಾಗ ಗುಟ್ಟಾಗಿ ಅವನಿಗೆ ಚಿಕಿತ್ಸೆ ಕೊಡಿಸಿದ್ರೆ ಹೀಗೆ ಎಲ್ಲರ ಮುಂದೆ ನಾವು ತಲೆತಗ್ಗಿಸಿ